ಮೂಡಿಸುತ್ತದೆ.

ಬಟ್ಟೆಯ ಮೇಲೆ ಕೈಯಿಂದಲೇ ಮುದ್ರಿಸುವ ಡಿಸೈನ್‌ಗಳ ಬ್ಲಾಕ್‌ಗಳನ್ನು ಸ್ಥಳೀಯವಾಗಿಯೇ ತಯಾರಿಸಲಾಗುತ್ತದೆ. ಈ ಡಿಸೈನ್ ಬ್ಲಾಕ್‌ಗಳನ್ನು ಕೈಯಿಂದಲೇ ಮಾಡುವ ಮೂರು ಕುಟುಂಬಗಳಷ್ಟೇ ಜೈಪುರದಲ್ಲಿವೆ. ಹಿಂದೆಲ್ಲ ಗುಲ್ಜನ್ ಎನ್ನುವ ಮರದ ಕಾಂಡದಿಂದ ಈ ಬ್ಲಾಕ್‌ಗಳನ್ನು ಮಾಡುತ್ತಿದ್ದರು. ಆದರೆ ಮರಗಳ ಸಂಖ್ಯೆ ವಿರಳವಾಗಿ ಸರಕಾರ ಇದನ್ನು ನಿಷೇಧಿಸಿತು. ಈಗ ಹಗುರವಾದ ಸೀಸದಿಂದ ಈ ಬ್ಲಾಕ್‌ಗಳನ್ನು ಮಾಡಲಾಗುತ್ತಿದೆ.

ಬಣ್ಣದ ಘಟಕವನ್ನು ನೋಡಿಕೊಳ್ಳುತ್ತಿರುವ ಆರ್‌ಕೆ ದೇರಾವಾಲ ಅವರ ಪುತ್ರ ರೋಶನ್ ದೇರಾವಾಲ, ಬಣ್ಣಗಳನ್ನು ಹರಳುಗಟ್ಟಿಸುವ ಈ ಪ್ರಕ್ರಿಯೆಯನ್ನು ವಿವರಿಸುತ್ತಿದ್ದರೆ, ಫ್ಯಾಬ್ ಇಂಡಿಯಾ ಬ್ರ್ಯಾಂಡ್ ಉತ್ಪನ್ನಗಳ ಹಿಂದಿರುವ ಕುಶಲಕರ್ಮಿಗಳ ಅಗಾಧ ಶ್ರಮ ಅಚ್ಚರಿ ಹುಟ್ಟಿಸುತ್ತದೆ. ಬಗ್ರು ಎಂಬ ಪುಟ್ಟ ಹಳ್ಳಿಯಲ್ಲಿರುವ ಸುಮಾರು 350 ಕುಟುಂಬಗಳು ಈ ಘಟಕದಿಂದಾಗಿ ಈಗ ಆರ್ಥಿಕ ಚೇತರಿಕೆ ಕಂಡಿವೆ ಎನ್ನುತ್ತಾರೆ ರೋಶನ್. 'ಜೈಪುರದ ಗ್ರಾಮೀಣ ಪ್ರದೇಶಗಳಲ್ಲಿ ನಶಿಸಿಹೋಗುತ್ತಿದ್ದ ಈ ಕಲೆಗಾರಿಕೆಯನ್ನು ಪುನಶ್ಚೇತನಗೊಳಿಸಲು ಫ್ಯಾಬ್ ಇಂಡಿಯಾ ಇಲ್ಲಿನ ಜನರಿಗೆ ಕುರಕುಶಲ ತರಬೇತಿ, ಮೂಲಸೌಲಭ್ಯ, ಮಾರುಕಟ್ಟೆ ವಿಸ್ತರಣೆ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದೆ' ಎನ್ನುತ್ತಾರೆ ಫ್ಯಾಬ್ ಇಂಡಿಯಾದ ಜೈಪುರದ ಪ್ರೊಡಕ್ಷನ್ ಹಬ್ ಮುಖ್ಯಸ್ಥೆ ಪಮೇಲಾ ಕೌಲ್.

ಬಗ್ರುವಿನಿಂದ ಕೆಲವೇ ಕಿ.ಮೀ ದೂರದಲ್ಲಿರುವ ಜಾಗ್ ಎಂಬ ಹಳ್ಳಿಯಲ್ಲಿ ಅಜ್ರಕ್ ಪ್ರಿಂಟಿಂಗ್ ಮಾಡುವ ಕುಟುಂಬವೊಂದಿದೆ. ತನ್ನದೇ ಆದ ವಿಧಾನದ ಮೂಲಕ ನೈಸರ್ಗಿಕ ಬಣ್ಣವನ್ನು ತಯಾರಿಸಿ, ಬ್ರಶ್ ಮೂಲಕ ಬಟ್ಟೆಗೆ ಹಚ್ಚುವ ಈ ವಿದ್ಯೆ ಇಲ್ಲಿನ ಒಂದೇ ಕುಟುಂಬಕ್ಕೆ ಗೊತ್ತಿತ್ತು. ಅದರಲ್ಲೂ ಕುಟುಂಬದ ಯಜಮಾನ ಆಕಸ್ಮಿಕವಾಗಿ ತೀರಿಕೊಂಡ ಬಳಿಕ ಆತನ ವಿಧವೆ ಈ ವಿದ್ಯೆಯನ್ನು ಪ್ರಹ್ಲಾದ್ ಎಂಬವರಿಗೆ ಕಲಿಸಿದಳು. ಈಗ ಪ್ರಹ್ಲಾದ್ ಮತ್ತು ಅವರ ಮಗ ಸಂಜಯ್ ಇಲ್ಲಿನ ಘಟಕವನ್ನು ನೋಡಿಕೊಳ್ಳುತ್ತಿದ್ದಾರೆ. ಇವರದ್ದು 14 ಜನ ಕೆಲಸಗಾರರ ಸಣ್ಣ ಘಟಕ. ಈ ಎರಡೂ ಘಟಕಗಳು ಫ್ಯಾಬ್ ಇಂಡಿಯಾಗೆ ತಮ್ಮ ಉತ್ಪನ್ನಗಳನ್ನು ಪೂರೈಸುತ್ತಿವೆ.

ಮರುಭೂಮಿಯ ನಾಡಾದರೂ ರಾಜಸ್ತಾನದಲ್ಲಿ ಬಣ್ಣಗಳ ಮೋಹ ಹೆಚ್ಚು. ಇಲ್ಲಿನ ಸ್ಥಳೀಯ ಕಲೆಗಾರಿಕೆ ವಿಶ್ವಪ್ರಸಿದ್ಧವಾದದ್ದು. ಈ ಬಣ್ಣಗಳಿಗೂ ಒಂದು ಇತಿಹಾಸವಿದೆ ಎನ್ನುವುದು ಕುತೂಹಲಕರ. ಬಗ್ರುವಿನ ಮಹಿಳೆಯರು ಉಡುತ್ತಿದ್ದ 40 ಗಜಗಳ ಗಾಗ್ರಾ ಗಳು ಸುಪ್ರಸಿದ್ಧ. ಅದರಲ್ಲೂ ಪ್ರತಿಯೊಂದು ಜಾತಿ ಮತ್ತು ಬುಡಕಟ್ಟುಗಳಿಗೆ ಪ್ರತ್ಯೇಕವಾದ ಬಣ್ಣಗಳ ಸಂಯೋಜನೆ ಇರುತ್ತಿತ್ತು. ಉದಾಹರಣೆಗೆ ಇಂಡಿಗೋ ನೀಲಿ ಬಣ್ಣದ ಗಾಗ್ರಾ ಗಳನ್ನು ಕೇವಲ ಗುಜ್ಜರ್ ಸಮುದಾಯದವರು ಧರಿಸುತ್ತಿದ್ದರು. ಬಾರ್ಡರ್ ಇರುವುದನ್ನು ಬ್ರಾಹ್ಮಣರು ಮಾತ್ರ ಬಳಸುತ್ತಿದ್ದರು. ಕೆಳಜಾತಿಯವರಿಗೇ ಬೇರೆ ವಿನ್ಯಾಸಗಳಿದ್ದವು. ಈಗಿನ ಫ್ಯಾಷನ್ ಲೋಕದಲ್ಲಿ ಈ ಬೇಧಭಾವಗಳು ಕಣ್ಮರೆಯಾಗಿವೆ. ಈಗ ಎಲ್ಲೆಡೆ ಎಲ್ಲರೂ ಅವರವರ ಇಷ್ಟದ ಬಣ್ಣದ ವಿನ್ಯಾಸದ ಬಟ್ಟೆಗಳನ್ನು ಧರಿಸುತ್ತಾರೆ.

ಫ್ಯಾಬ್ ಇಂಡಿಯಾ ಸಾಮಾನ್ಯವಾಗಿ ಕೆಂಪು, ಕಪ್ಪು ಮತ್ತು ನೀಲಿ– ಹೀಗೆ ಮೂರು ಬಣ್ಣಗಳ ಮೇಲೆಯೇ ಹೆಚ್ಚು ಒತ್ತು ಕೊಟ್ಟು ಫ್ಯಾಶನ್ ಮಾರುಕಟ್ಟೆಗೆ ತನ್ನ ಉತ್ಪನ್ನಗಳನ್ನು ಒದಗಿಸುತ್ತಿದೆ. ಆದರೆ ಇಂಡಿಗೋ ನೀಲಿ ಫ್ಯಾಬ್ ಇಂಡಿಯಾದ ಅತ್ಯಂತ ನೆಚ್ಚಿನ ಬಣ್ಣ. ಈ ಬಣ್ಣದ ಸಂಸ್ಕರಣೆ ಹೆಚ್ಚು ಶ್ರಮವನ್ನು ಬೇಡುತ್ತದೆ. 'ಈ ಇಂಡಿಗೋ ಬಣ್ಣದ ಬ್ಲಾಕ್‌ಗಳು ಆಂಧ್ರಪ್ರದೇಶದಿಂದ ಕೇಕ್‌ಗಳ ರೂಪದಲ್ಲಿ ಬರುತ್ತವೆ. ಇಲ್ಲಿ ಅದನ್ನು ಪೌಡರ್ ಮಾಡುತ್ತೇವೆ. ನಮ್ಮಲ್ಲಿ ನೀಲಿ ಬಣ್ಣವನ್ನು ಸಂಸ್ಕರಿಸುವ ನಾಲ್ಕು ಗುಂಡಿಗಳಿವೆ. ಜಪಾನ್‌ನಲ್ಲಿ ಕೆಲವು ಘಟಕಗಳಲ್ಲಿ 100ಕ್ಕೂ ಹೆಚ್ಚು ಗುಂಡಿಗಳಿರುವ ಘಟಕಗಳಿವೆ. ಈ ನೈಸರ್ಗಿಕ ನೀಲಿ ಬಣ್ಣದ ಕುರಿತು ಹಳ್ಳಿ ಜನರ ತಿಳುವಳಿಕೆ ಸಿಂಧೂ ನದೀ ತೀರದ ನಾಗರಿಕತೆಯಲ್ಲೇ ಇತ್ತು' ಎನ್ನುತ್ತಾರೆ ರೋಶನ್ ದೇರಾವಾಲ. ರೋಶನ್



ಪ್ರಿಂಟ್ ಅನ್ನು ತಯಾರು ಮಾಡುತ್ತಿರುವ ಕುಶಲಕರ್ಮಿ